ನನ್ನ ಓದು

# ಚರಿತ್ರೆ–ಜೀವನದ ಅಪೂರ್ವ ಯುಗಳ



**ರಾಜೇಂದ್ರ ಚೆನ್ನಿ**

ಒಬ್ಬ ಶ್ರೇಷ್ಠ ಕವಿಯ ಕಾವ್ಯವು ಮಾಗುತ್ತಾ, ಕಾವ್ಯದ ಸಾಧ್ಯತೆಗಳನ್ನು ಬಗೆಯುತ್ತಾ ಒಂದು ಹಂತದಲ್ಲಿ ಕಾವ್ಯವಾಗಬೇಕೆನ್ನುವ ಹೊರೆಯನ್ನು ಕಳಚಿಕೊಂಡು ನೇರವಾಗಿ ಬದುಕಿನ ನಾಡಿಮಿಡಿತವನ್ನು ಹಿಡಿಯುವ ಸ್ಥಿತಿಗೆ ತಲುಪುತ್ತದೆಯಾ ಎನ್ನುವ ಪ್ರಶ್ನೆ ನನಗೆ ಅನೇಕ ಸಾರಿ ಎದುರಾಗಿದೆ. ಈ ಪ್ರಶ್ನೆ ಮತ್ತೆ ಎದುರಾಗಿದ್ದು, ತಿರುಮಲೇಶರ ಕೊನೆಯ ಕಾವ್ಯಸಂಕಲನ 'ಅಪ್ರಮೇಯ'ವನ್ನು ಓದಿದಾಗ. ಇಂಥ ಸಿದ್ಧಿ ಎಲ್ಲ ಕವಿಗಳಿಗೂ ದಕ್ಕುವುದಿಲ್ಲ. ಅಲ್ಲದೆ ನಾನು ಪ್ರಶ್ನೆ ಎಂದು ಹೇಳಿದ್ದರೂ ಅದು ಪ್ರಶ್ನೆ ಅಲ್ಲ. ಅದು, ನನಗೆ ಅನ್ನಿಸಿದ ಅಚ್ಚರಿ ಮತ್ತು ಇಂಥ ಶ್ರೇಷ್ಠ ಕಾವ್ಯವನ್ನು ಓದಿದಾಗ ಅನ್ನಿಸುವ ಸಾರ್ಥಕ ಭಾವನೆ. ಈ ಸಂಕಲನದ ಕವನಗಳನ್ನು ಒಮ್ಮೆ ಓದಿ ಮುಗಿಸಿಬಿಡುವಂತಿಲ್ಲ. ರೂಮಿ, ನೆರೂಡಾ, ಬೇಂದ್ರೆಯವರ ಕಾವ್ಯದಂತೆ ಮತ್ತೆ ಮತ್ತೆ ಓದುತ್ತಲೇ ಇರಬೇಕಾದ ಕವನಗಳಿವು. ಏಕೆಂದರೆ ಅವು ನಿಗದಿ ಮಾಡಿದ ಒಂದು ಅರ್ಥವನ್ನು ಕೊಡುವುದಿಲ್ಲ. ಜೀವನದ ನಮ್ಮ ಅನುಭವಗಳಿಗೆ ಮರಳಿ ಅವುಗಳನ್ನು ಶೋಧಿಸಿಕೊಂಡು ಮತ್ತೆ ಅವುಗಳಿಗೆ ವಾಪಸ್ಸು ಬರುವಂತೆ ಒತ್ತಾಯಿಸಿದ ಕವನಗಳಿವು.

ಬರೆದದ್ದನ್ನು ಕಾವ್ಯವಾಗಿಸುವ ಹೊರೆಯನ್ನು ಕಳಚಿಬಿಟ್ಟು ಇಲ್ಲಿ ತಿರುಮಲೇಶರು ಅತ್ಯಂತ ಅನೌಪಚಾರಿಕವಾದ, ಮುಕ್ತವಾದ ಶೈಲಿಯಲ್ಲಿ ಬರೆದಿದ್ದಾರೆ. ಗದ್ಯ, ಪದ್ಯ, ಹರಟೆ, ಸಂಭಾಷಣೆ ಇವೆಲ್ಲವೂ ಅಂತಿಮವಾಗಿ ಕಾವ್ಯದ ಪ್ರಕಾರಗಳೇ ಇರಬಹುದು ಅಥವಾ ಇಲ್ಲದಿದ್ದರೆ ಏನಂತೆ ಎನ್ನುವ ನಿರ್ಭಿಡೆಯಿಂದ ಬರೆದಿದ್ದಾರೆ. ಈ ನಿರುಮ್ಮಳವಾದ ಕಾವ್ಯದ ವಸ್ತು ಮಾತ್ರ ಅಗಾಧವಾಗಿದೆ. ಜಗತ್ತಿನ, ಅದರಲ್ಲೂ ವಿಶೇಷವಾಗಿ ಯೂರೋಪಿನ ಮತ್ತು ಕ್ರಿಶ್ಚಿಯನ್ ಪುರಾಣಗಳು (myths), ಮನುಷ್ಯ ನಾಗರಿಕತೆಯ ಹಲವಾರು ಮಜಲುಗಳು, ಮಿಸ್ಸಿಸಿಪ್ಪಿ, ಮೊಹೆಂಜೊದಾರೊ, ಮಚ್ಚುಪಿಚ್ಚು ಮುಂತಾದ ಭೌಗೋಳಿಕ ಪ್ರದೇಶಗಳಾಗಿದ್ದರೂ ನಮ್ಮ ಸಾಮುದಾಯಿಕ ಪ್ರಜ್ಞೆಯ ಸಂಕೇತಗಳಾಗಿರುವ ವಿದ್ಯಮಾನಗಳು, ಯಹೂದಿಗಳ ಮಾರಣಹೋಮ, ಸ್ಟಾಲಿನ್ ಕಾಲದ ಕೊಲೆಗಳ ಮೂಲಕ ಮಾಡಿದ